# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ, ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ-118/ವಾರ್ಡ್‌ಸಭೆ/2022-23 ದಿನಾಂಕ: 16/7/22

## ವಾರ್ಡ್ -118ರ ವಾರ್ಡ್ ಸಭೆಯ ನಡವಳಿ

ದಿನಾಂಕ:16-07-2022ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್-118ರ ವಾರ್ಡ್ ಕಛೇರಿಯಲ್ಲಿ ಡಾ!!. ಚಂದ್ರಯ್ಯ.ಟಿ. ಉಪ ನಿರ್ದೇಶಕರು ಪಶುಪಾಲನೆ ವಾರ್ಡ್-118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:-

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಡಾ!!. ಚಂದ್ರಯ್ಯ.ಟಿ | ನೋಡಲ್ ಅಧಿಕಾರಿಗಳು | 9902041310 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀ.ಹೆಚ್.ಎನ್.ಸ್ವಾಮಿ | ಹೆಚ್.ಐ.ಓ | 8884224554 |
| 4 | ಡಾ!!.ಅರುಣ್‌ಕುಮಾರ್ | ಪಿ.ಜಿ | |
| 5 | ಶ್ರೀ.ಎಸ್.ಕುಮಾರ್‌ವೇಲು | ಹಿರಿಯ ಆರೋಗ್ಯ ಪರಿವೀಕ್ಷಕರು | 9480688745 |
| 6 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 7 | ಶ್ರೀ. ಸರ್ದಾರ್ | ಜೆ.ಇ/ಎಸ್-2/ಡಬ್ಲ್ಯೂ-2 ಬೆಸ್ಕಾಂ | 9449866105 |
| 8 | ಶ್ರೀ.ಶ್ರೀನಿವಾಸ್ | ಸ್ಥಳೀಯರು | 9343381555 |
| 9 | ಶ್ರೀ.ಜಾಕ್ | ವಿನೋಭನಗರ ಸ್ಥಳೀಯರು | 9741912926 |
| 10 | ಶ್ರೀ.ರವಿ | ಸ್ಥಳೀಯರು | 9901051478 |
| 11 | ಶ್ರೀ.ರಮೇಶ್ | ಸ್ಥಳೀಯರು | 9449220317 |
| 12 | ಶ್ರೀ.ಟಿ.ಸಾಯಿನಾಥ್ | ಸ್ಥಳೀಯರು | 9900405383 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

## ಚರ್ಚಿಸಲಾದ ವಿಷಯಗಳು:-

## ಕಾಮಗಾರಿ ಇಲಾಖೆ

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಸ್ಥಳೀಯರಾ ಜಾಕ್ ರವರು ಮಾತನಾಡಿ ವಿನೋಭನಗರ ಶೌಚಾಲಯದ ಬಾಗಿಲುಗಳನ್ನು ದುರಸ್ಥಿಗೊಳಿಸಬೇಕೆಂದು ಕೋರಿರುತ್ತಾರೆ. ವಿನೋಭನಗರ 1ನೇ, 2ನೇ, 3ನೇ ಅಡ್ಡರಸ್ತೆಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಳೆಪ ಕಾಮಗಾರಿಯನ್ನು ಮಾಡಿರುತ್ತಾರೆ. ಸುಮಾರು ಬಾರಿ ತಿಳಿಸಿದ್ದರೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಯಾವುದೇ ಪ್ರಯೋಜನವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ, ಐದು ವಿದ್ಯುತ್ ಕಂಬಗಳ ದುರಸ್ಥಿಯಲ್ಲಿದ್ದು, ಇದನ್ನು ಬದಲಾಯಿಸಬೇಕೆಂದು ಬೆಸ್ಕಾಂ ಅಭಿಯಂತರರಿಗೆ ತಿಳಿಸಿರುತ್ತಾರೆ. ಗುರುಪ್ಪ ಗಾರ್ಡನ್‌ನಲ್ಲಿ ಶಿಥಿಲಾಗೊಂಡಿರುವ ಕಟ್ಟಡಗಳ ತೆರವುಗೊಳಿಸುವ ಬಗ್ಗೆ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಗೃಹ ಮಂಡಳಿ ಇಲಾಖೆಗೆ ಪತ್ರ ಬರೆಯಲಾಗಿದೆ ಎಂಬ ವಿಷಯವನ್ನು ಪ್ರಸ್ತಾಪಿಸಲಾಯಿತು. ನೂನತವಾಗಿ ವಿನೋಭನಗರದಲ್ಲಿ ಸಮುದಾಯ ಭವನದ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಯನ್ನು ಸ್ಥಳ ಬದಲಾವಣೆಯನ್ನು ಮಾಡಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

## ಆರೋಗ್ಯ ಇಲಾಖೆ

ಡಾ!! ಅರುಣ್ ರವರು ಮಾತನಾಡಿ ಜೈನ್ ಹೈಟ್ಸ್ ಕಟ್ಟಡದಲ್ಲಿ ಪ್ರತಿ ಭಾನುವಾರ 12 ವರ್ಷ ಮೇಲ್ಪಟ್ಟಿರುವರಿಗೆ ಲಸಿಕೆಯನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ, ಕೋವಿಡ್ ಲಸಿಕೆಯನ್ನು ಸೋಮವಾರ ಮತ್ತು ಬುಧವಾರ ಯು.ಪಿ.ಹೆಚ್.ಎ, ಕೆಂಪಯ್ಯ ಗಿರಿಯಮ್ಮ ಆಸ್ಪತ್ರೆಯಲ್ಲಿ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ಕೋವಿಡ್ ತಪಾಸಣೆಯನ್ನು ಮೆಜೆಸ್ಟಿಕ್ ಸುತ್ತಮುತ್ತಲಿನಲ್ಲಿ ಪ್ರದೇಶದಲ್ಲಿ ಮಾಡುತ್ತಿದ್ದು, ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಘನತ್ಯಾಜ್ಯ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ಎಲ್ಲಾ Black spot ಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ವಾರ್ಡ್ ಸಂಖ್ಯೆ: 118ರಲ್ಲಿ ಹಲವು ಕಡೆ ಸ್ವಚ್ಛಗೊಳಿಸಿ ಬ್ಲಿಚಿಂಗ್ ಪೌಡರ್ ಅಳವಡಿಸಿದ್ದರೂ ಸಹ ನಂತರದ ಸಮಯದಲ್ಲಿ ಸ್ಥಳೀಯರು ಕಸವನ್ನು ಪುನಃ ಹಾಕುತ್ತಾರೆ ಎಂದು ತಿಳಿಸಿರುತ್ತಾರೆ.

## ಪೊಲೀಸ್ ಇಲಾಖೆ

ನಂತರದಲ್ಲಿ ಶ್ರೀ.ರವಿ ಸ್ಥಳೀಯರು ಮಾತನಾಡಿ ಹೆಚ್.ಸಿದ್ದಯ್ಯ ರಸ್ತೆಯ ರೆಫರಲ್ ಆಸ್ಪತ್ರೆಯ ಮುಂಭಾಗ ಹಾಗೂ ಸುತ್ತಮುತ್ತಲಿನಲ್ಲಿ ಅನೇಕ ವಾಹನಗಳು ನಿಂತಿದ್ದು, ಸದರಿ ವಾಹನಗಳನ್ನು ದಂಡ ವಿಧಿಸಬೇಕೆಂದು, ರಫೆರಲ್ ಅಸ್ಪತ್ರೆಯ ಸುತ್ತಮುತ್ತಲಿನಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಲು ಹಾಗೂ ರಫರಲ್ ಆಸ್ಪತ್ರಯ ಹತ್ತಿರ ಸಂಚಾರಿ ಪೊಲೀಸ್ ರವರನ್ನು ನಿಲ್ಲಿಸಬೇಕೆಂದು ಸಭೆಯಲ್ಲಿ ಕೋರಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಮಳೆ ಹೆಚ್ಚಾಗಿರುವುದರಿಂದ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

16/7/22

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –118 ಸುಧಾಮನಗರ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118